

**ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.**

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

✉ ಗಂಡಸು, 24 ವರ್ಷ, ಪದವೀಧರ, ಉದ್ಯೋಗ ಹುಡುಕುತ್ತಿದ್ದೇನೆ. ತಾಯ್ತಂದೆಯರಿಗೆ ಒಬ್ಬನೇ ಮಗ. ಅವರಿಬ್ಬರೂ ನನಗೆ ಸ್ನಾನ, ಊಟ, ಬಟ್ಟೆ ಹಾಕುವುದು, ಮಲಗಿಸುವುದು ಇತ್ಯಾದಿ ಮಾಡುತ್ತಾರೆ. ನಾನಾಗಿ ಮಾಡಿಕೊಳ್ಳುತ್ತೇನೆ ಎಂದರೆ ನೀನು ನಮಗೆ ಮಗುವೇ ಎನ್ನುತ್ತಾರೆ. ಪ್ರತಿ ಭಾನುವಾರ ಅಪ್ಪ ಅಮ್ಮ ಸೇರಿ ನನ್ನನ್ನು ಬೆತ್ತಲೆಗೊಳಿಸಿ ಎಣ್ಣೆ ಹಚ್ಚಿ (ಗುಪ್ತಾಂಗದ ಮೇಲೆ ಹಚ್ಚುವಾಗ ಅದು ನಿಮಿರಿರುತ್ತದೆ) ಮಸಾಜ್ ಮಾಡಿಸಿ ಕನಿಷ್ಠ ಒಂದು ಗಂಟೆ ಸ್ನಾನ ಮಾಡಿಸುತ್ತಾರೆ. ತಿಂಗಳಿಗೊಮ್ಮೆ ನನ್ನ ತಂದೆ ನನ್ನ ಗುಪ್ತಾಂಗದ ರೋಮಗಳನ್ನು ತೆಗೆಯುತ್ತಾರೆ. ರಾತ್ರಿ ಇಬ್ಬರ ನಡುವೆ ನನ್ನನ್ನು ಬೆತ್ತಲೆ ಮಲಗಿಸಿಕೊಳ್ಳುವ ಅಭ್ಯಾಸ ಮೊದಲಿನಿಂದಲೂ ಇದೆ. ಅದಕ್ಕೇನೂ ನನ್ನ ಅಭ್ಯಂತರವಿಲ್ಲ. ಆದರೆ ಅವರಿಂದ ಜನನಾಂಗ ಮುಟ್ಟಿಸಿಕೊಳ್ಳುವಾಗ, ಅವರ ನಡುವೆ ಬೆತ್ತಲೆ ಮಲಗಿದಾಗ ಶಿಶ್ನ ನಿಮಿರಿ ಸಂಕೋಚವಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ, ಇವರಿಬ್ಬರು ಇರುವಾಗ ಶಿಶ್ನದ ಉದ್ರೇಕವನ್ನು ತಡೆಯುವುದು ಹೇಗೆ? ನನ್ನ ತಂದೆತಾಯಿಯರ ಮನಸ್ಸನ್ನು ನೋಯಿಸಲು ನಾನು ಸಿದ್ಧನಿಲ್ಲ.

ನಿಮ್ಮನ್ನು ತುಂಬ ಪ್ರೀತಿಸುವ ತಾಯ್ತಂದೆಯರು ಸಿಕ್ಕಿದ್ದಾರೆ, ಸಂತೋಷ. ಆದರೆ ಇಲ್ಲೊಂದು ಚಿಕ್ಕ ಸಂದೇಹವಿದೆ. ನಿಮ್ಮನ್ನು ಮಗುವಿನಂತೆ ನೋಡಿಕೊಳ್ಳುವವರು ತೊಡೆಯ ಮೇಲೆ ಮಲಗಿಸಿಕೊಂಡು ಎದೆಹಾಲು ಕುಡಿಸುವ, ಶೌಚದ ನಂತರ ನಿಮ್ಮ ಪೃಷ್ಠವನ್ನು ತೊಳೆಯುವ ಕೆಲಸವನ್ನು ಏಕೆ ಮಾಡುತ್ತಿಲ್ಲ? ನಿಮ್ಮನ್ನು ಕಾಲೇಜಿನ ಬದಲು ಶಿಶುವಿಹಾರಕ್ಕೆ ಯಾಕೆ ಕಳಿಸುತ್ತಿಲ್ಲ? ಹೀಗೆ ಯೋಚಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ: ನೀವು ಶಾರೀರಿಕವಾಗಿ ಮತ್ತು ಬೌದ್ಧಿಕವಾಗಿ ಬೆಳೆದಿರುವುದು ಅವರ ಅರಿವಿಗೆ ಬಂದಿದ್ದರೂ ಅಲ್ಲಗಳೆಯುತ್ತ, 'ನಗ್ನತೆಯು ಶೈಶವದ ಸಂಕೇತ' ಎಂದು ನಂಬುತ್ತ, ಬೆಳೆಯುತ್ತಿರುವ ನಿಮ್ಮನ್ನು ಮಗುವನ್ನಾಗಿ ಕುಗ್ಗಿಸುತ್ತಿದ್ದಾರೆ. ಅದಕ್ಕೆ ಪೂರಕವಾಗಿ 'ನಗ್ನತೆಯು ಸಮರ್ಪಣೆಯ ಸಂಕೇತ' ಎಂದು ನೀವು ಮಗುವಾಗಿಯೇ ಉಳಿಯುತ್ತ ನಿಮ್ಮ ಸಹಜ ಕಾಮೋದ್ರೇಕವನ್ನು ತಡೆಹಿಡಿಯುತ್ತಿದ್ದೀರಿ. ಇದರ ಪರಿಣಾಮ ನಿಮ್ಮ ಭವಿಷ್ಯದ ಮೇಲೆ ಏನಾಗಬಹುದು ಎಂದು ನೋಡೋಣ. ಬೆತ್ತಲೆಯಾಗಿದ್ದೂ ಕಾಮೋದ್ರೇಕವನ್ನು ಕಳೆದುಕೊಂಡಿರುವ ನಿಮಗೆ ನಾಳೆ ಹೆಂಡತಿ ಪಕ್ಕದಲ್ಲಿ ಬೆತ್ತಲೆಯಾಗಿರುವಾಗ ಕಾಮಾಪೇಕ್ಷೆ ಹುಟ್ಟಲು ಹೇಗೆ ಸಾಧ್ಯ? ಸಮರ್ಪಣಾಭಾವದಿಂದ ಹಾಸಿಗೆಯಲ್ಲಿ ಇರುವವರು ಹೆಂಡತಿಯ ಜೊತೆಗೆ ಹೇಗೆ ಕ್ರಿಯಾಶೀಲವಾಗುವಿರಿ? ಇನ್ನೊಬ್ಬರಿಂದ ಜನನಾಂಗವನ್ನು ಮುಟ್ಟಿಸಿಕೊಳ್ಳುವುದರಿಂದ ಆಗುವ ಕಾಮಸಂವೇದನೆಗಳನ್ನು ಬೇಡವೆನ್ನುವವರು ಹೆಂಡತಿಯ ಸ್ಪರ್ಶಕ್ಕೆ ಹೇಗೆ ಸ್ಪಂದಿಸುವಿರಿ? ಕಾಮಸುಖಕ್ಕಾಗಿ ಯಾರೇ ಆಗಲಿ, ಬಹುಮಟ್ಟಿನ ಖಾಸಗೀತನವನ್ನೂ ಪ್ರತ್ಯೇಕತೆಯನ್ನೂ ಬೆಳೆಸಿಕೊಂಡಿರುವುದು ಅಗತ್ಯ. ಇಲ್ಲದಿದ್ದರೆ 'ನನ್ನದು– ಸಂಗಾತಿಯದು' ಎಂಬ ತಾರತಮ್ಯವಿಲ್ಲದೆ, ಯಾವುದನ್ನೂ ಯಾವುದರ ಜೊತೆಗೆ ಮೇಳೈಸಲಾಗದೆ ಗೊಂದಲವಾಗುವುದು ಖಂಡಿತ. ಇದು ನಿಮ್ಮ ದಾಂಪತ್ಯಕ್ಕೆ ಮಾರಕವಾಗುವುದರಲ್ಲಿ ಸಂದೇಹವಿಲ್ಲ. ನಿಮ್ಮ ನಿಜವಾದ ಸಮಸ್ಯೆಯು ತಾಯ್ತಂದೆಯರ ಜೊತೆಗೆ ಮಲಗಿದ್ದು ಕಾಮಪ್ರಚೋದನೆಯನ್ನು ತಡೆಗಟ್ಟುವುದು ಹೇಗೆ ಎನ್ನುವುದಲ್ಲ; ಬದಲಾಗಿ, ಕಾಮಪ್ರಚೋದನೆಗೆ ಪ್ರೋತ್ಸಾಹ ಕೊಡಲು ತಾಯ್ತಂದೆಯರಿಂದ ಪ್ರತ್ಯೇಕಗೊಳ್ಳುವುದು ಹೇಗೆ ಎನ್ನುವುದರ ಬಗೆಗೆ! ಹೀಗೆ ನಿಮ್ಮ ಗುರಿಯ ದಿಕ್ಕು ಬದಲಾಯಿಸಿದ ನಂತರ ಮುಂದಿನ ಸುಖದಾಂಪತ್ಯಕ್ಕಾಗಿ ಈ ಮಾರ್ಗ ಅನುಸರಿಸಿ. 1) ತಂದೆತಾಯಿ ಇಬ್ಬರಿಗೂ ಈ ಲೇಖನವನ್ನು ಓದಲು ಕೊಡಿ. ನಂತರ ಅವರನ್ನು ಕೂಡಿಸಿಕೊಂಡು ನೀವು ಬೆಳೆದಿರುವುದನ್ನೂ, ನಿಮಗೆ ಖಾಸಗಿತನ ಬೇಕಾಗಿರುವುದನ್ನೂ ಸ್ಪಷ್ಟಪಡಿಸಿ. 2) ನಿಮ್ಮನ್ನಿನ್ನೂ ಮಗುವೆಂದುಕೊಳ್ಳುವ ಅವರ ಈ ನಡವಳಿಕೆಯು ಪ್ರೀತಿಯ ಲಕ್ಷಣವಲ್ಲ, ಅದಕ್ಕೆ ವ್ಯತಿರಿಕ್ತವಾಗಿ ನಿಮ್ಮ ಖಾಸಗೀತನದ ಬೆಳವಣಿಗೆಗೆ ಅಡ್ಡಿ ಎಂಬುದನ್ನು ಸ್ಪಷ್ಟಪಡಿಸಿ. ನೀವು ಮೈತುಂಬ ಬಟ್ಟೆ ಹಾಕಿಕೊಂಡಿದ್ದರೂ ಅವರು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಬಹುದು ಎಂದು ಹೇಳಿ. ಇದಕ್ಕೆ ಒಪ್ಪದಿದ್ದರೆ, 'ನಿಮ್ಮ ತಾಯ್ತಂದೆಯರ ಜೊತೆಗೆ ಎಷ್ಟು ವಯಸ್ಸಿನ ತನಕ ಬೆತ್ತಲೆ ಮಲಗಿದ್ದಿರಿ? ಅವರೇಕೆ ನಿಮ್ಮನ್ನು ಪ್ರತ್ಯೇಕ ಮಲಗಲು ಅವಕಾಶ ಮಾಡಿಕೊಟ್ಟರು? ನೀವಿಬ್ಬರೂ ಪರಸ್ಪರ ಪ್ರೀತಿಸುವುದಾದರೆ ನೀವೇಕೆ ನನ್ನೆದುರು ಒಟ್ಟಿಗೆ ಸ್ನಾನ ಮಾಡುವುದಿಲ್ಲ?' ಎಂದು ಪ್ರಶ್ನಿಸಿ. ಆಗ ಅವರು ನಿಮ್ಮ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುತ್ತಾರೆ. 3) ಒಬ್ಬರೇ ಬಾಗಿಲು ಹಾಕಿಕೊಂಡು ಸ್ನಾನ ಮಾಡುವುದನ್ನು, ಬಟ್ಟೆ ಧರಿಸುವುದನ್ನು ಕಲಿಯಿರಿ. 4) ನಿಮಗಾಗಿ ಪ್ರತ್ಯೇಕ ಕೋಣೆಯೊಂದನ್ನು ಮಾಡಿಕೊಳ್ಳಿ. ಗೋಡೆಗಳಿಗೆ ಮನಮೆಚ್ಚುವ ಸುಂದರಿಯರ ಚಿತ್ರಗಳನ್ನು ತೂಗುಹಾಕಿ, ನಿಮ್ಮದೇ ವಾತಾವರಣವನ್ನು ಸೃಷ್ಟಿಸಿಕೊಳ್ಳಿ. ಒಬ್ಬರೇ ಮಲಗುವುದನ್ನು ಅಭ್ಯಾಸ ಮಾಡಿ. 5) ರಾತ್ರಿಯ ಏಕಾಂತದಲ್ಲಿ ನಿಮ್ಮ ಜನನಾಂಗವನ್ನು ಕುತೂಹಲದಿಂದ ಸ್ಪರ್ಶಿಸುತ್ತ ಉದ್ರೇಕಗೊಳಿಸಿಕೊಳ್ಳಿ. ನಿಮಗೊಪ್ಪುವ ತರುಣಿಯ ಜೊತೆ ಮಲಗಿರುವುದನ್ನು ಕಲ್ಪಿಸಿಕೊಳ್ಳುತ್ತ, ಅವಳ ಅಂಗಾಂಗಗಳನ್ನು ಸ್ಪರ್ಶಿಸುತ್ತಿದ್ದೇನೆ ಎಂದುಕೊಂಡು ಕಾಮೋದ್ರೇಕ ತಂದುಕೊಳ್ಳುತ್ತ ಹಸ್ತಮೈಥುನ ಮಾಡಿಕೊಳ್ಳಿ. ನಂತರ ನಿಮಗಾದ ಅನುಭವವನ್ನು ನೆನೆಸಿಕೊಂಡು 'ನಾನೂ ಗಂಡು' ಎಂದು ಹೆಮ್ಮೆಪಟ್ಟುಕೊಳ್ಳಿ. ಅಗತ್ಯವಾದರೆ ಹೆಚ್ಚಿನ ಪ್ರಚೋದನೆಗಾಗಿ ಕಾಮಸಾಹಿತ್ಯವನ್ನು ಓದುತ್ತ– ವೀಕ್ಷಿಸುತ್ತ, ಕಲ್ಪನಾವಿಲಾಸವನ್ನು ಬೆಳೆಸಿಕೊಳ್ಳಿ. ಕಾಮೋದ್ರೇಕ– ಕಾಮತೃಪ್ತಿಗೆ ಮುಕ್ತ ಅವಕಾಶ ಮಾಡಿಕೊಳ್ಳುತ್ತ ಕಾಮಜೀವಿಯಾಗಿ ಪರಿವರ್ತನೆಗೊಳ್ಳಲು ನಿಸ್ಸಂಕೋಚದಿಂದ ಯತ್ನಿಸಿ. 5) ಸ್ನೇಹಿತರ ಜೊತೆಗೆ ಬೆರೆಯುತ್ತ ಚರ್ಚೆ, ಭೇಟಿ, ಪ್ರವಾಸ ಇತ್ಯಾದಿಗಳಲ್ಲಿ ತೊಡಗಿ, ಹೆಣ್ಣುಗಂಡುಗಳ ಸಂಬಂಧದ ಬಗೆಗೆ ಅವರ ಅಭಿಪ್ರಾಯ, ಅನುಭವಗಳನ್ನು ಅರಿಯಿರಿ. ಹೀಗೆ ಅಭ್ಯಾಸ ಮಾಡುತ್ತಿದ್ದರೆ ಕ್ರಮೇಣ ತಾಯ್ತಂದೆಯರ ಜೊತೆಗೆ ಪ್ರೀತಿಯ ಸಂಬಂಧವನ್ನು ಹೊಂದಿದ್ದರೂ ಅವರಿಂದ ಪ್ರತ್ಯೇಕಗೊಂಡು ಕಾಮಜೀವಿಯಾಗಿ, ಹೆಣ್ಣಿನೊಡನೆ ಒಂದಾಗುವುದನ್ನು ಕಲಿಯುವಿರಿ. ಸಮಸ್ಯೆ ಬಗೆಹರಿಯದಿದ್ದರೆ ಲೈಂಗಿಕ ಚಿಕಿತ್ಸಕರನ್ನೋ ಮನೋಚಿಕಿತ್ಸಕರನ್ನೋ ಸಂಪರ್ಕಿಸಿ. ಒಟ್ಟಾರೆ ಹೇಳಬೇಕೆಂದರೆ, ತಾಯ್ತಂದೆಯರ ಮನಸ್ಸನ್ನು ನೋಯಿಸದಿರಲು ನಿಮ್ಮ ಪ್ರತ್ಯೇಕತೆಯನ್ನಾಗಲೀ ಖಾಸಗಿತನವನ್ನಾಗಲೀ ಅಥವಾ ಬೆಳವಣಿಗೆಯನ್ನಾಗಲೀ ಬಲಿಕೊಡುವ ಅಗತ್ಯವಿಲ್ಲ! ಇದಕ್ಕೊಂದು ದೃಷ್ಟಾಂತ: ತಮ್ಮ ಮರಿಯ ಬಾಯಿಗೆ ಬಾಯಿಹಾಕಿ ಗುಟುಕು ಕೊಟ್ಟು ಬೆಳೆಸುವ ಪಕ್ಷಿಗಳೂ ಕೂಡ ಅದರ ರೆಕ್ಕೆಗಳು ಬಲಿತಾಗ ಅದನ್ನು ಮರದ ಎತ್ತರದಿಂದ ಕೆಳಗೆ ತಳ್ಳುತ್ತವೆ!

✉ ಒಂದು ಗಂಡು, ಒಂದು ಹೆಣ್ಣಿನ ಕಾಮದಿಂದ ಮನುಷ್ಯನ ಜನನ? ಬೇರೆ ರೀತಿಯಾಗಿದ್ದರೆ ಒಳ್ಳೆಯದಿತ್ತೇನೋ?

ಬೇರೆ ರೀತಿಯಲ್ಲಿ ಆಗಬೇಕೆಂದರೆ ಇನ್ನೊಂದು ಸಾಧ್ಯತೆಯಿದೆ: ಗಂಡಿನ ಸಂಪರ್ಕವಿಲ್ಲದೆ ಹೆಣ್ಣು ಸಂತಾನೋತ್ಪತ್ತಿ ಮಾಡುವುದು. (ಕೆಲ ಕೀಟಗಳಲ್ಲಿ ಇದೆ. ಇದಕ್ಕೆ ಪಾರ್ಥೆನೋಜೆನೆಸಿಸ್ ಎನ್ನುತ್ತಾರೆ.) ಇದರ ಸಂತಾನ ತಾಯಿಯ ತದ್ರೂಪವಾಗಿರುತ್ತದೆ. ಇದರ ದೋಷವೆಂದರೆ, ಒಂದು ಜೀವಿಯನ್ನು ಕೊಲ್ಲುವ ಒಂದು ರೋಗಾಣು ಇಡೀ ತದ್ರೂಪಿ ಜನಾಂಗವನ್ನೇ ನಾಶಮಾಡಬಲ್ಲದು! ಇದಕ್ಕೆ ವ್ಯತಿರಿಕ್ತವಾಗಿ, ವಿವಿಧ ಹೆಣ್ಣುಗಂಡುಗಳು ಪರಸ್ಪರ ಕೂಡಿ ಹುಟ್ಟುವ ಸಂತಾನ ವೈವಿಧ್ಯ ಗುಣವಿಶೇಷಗಳನ್ನು ಹೊಂದಿರುತ್ತದೆ. ಈ ಜೀವಿಗಳು ಪ್ರಕೃತಿಯ ವೈಪರೀತ್ಯಗಳನ್ನು ಎದುರಿಸುವಾಗ ದುರ್ಬಲರು ನಾಶವಾಗುತ್ತ ಸಮರ್ಥರು ಮಾತ್ರ ಬೆಳೆಯುತ್ತಾರೆ. ಹಾಗಾಗಿ ಮಾನವ ಜನಾಂಗವು ದಿನೇದಿನೇ ಉತ್ಕ್ರಾಂತಿ ಹೊಂದಲು ಸಾಧ್ಯವಾಗುತ್ತದೆ. ಇದಕ್ಕಾಗಿಯೇ ಹೆಣ್ಣುಗಂಡುಗಳಲ್ಲಿ ಪ್ರತ್ಯೇಕತೆ, ವಿಭಿನ್ನತೆ,ಅನ್ಯೋನ್ಯತೆ ಅಂಶಗಳು ಮಹತ್ವದ ಸ್ಥಾನ ಪಡೆದುಕೊಂಡಿವೆ. ಹಾಗಿಲ್ಲದಿದ್ದರೆ ಮಾನವ ಜೀವನಕ್ಕೂ ಅಮೀಬದ ಜೀವನಕ್ಕೂ ವ್ಯತ್ಯಾಸವಿರುತ್ತಿರಲಿಲ್ಲ. ಆಗ ನೀವೇನು ಅಂದುಕೊಳ್ಳುತ್ತಿದ್ದೀರಿ? 'ಜೀವನವೆಂದರೆ ಎಷ್ಟೊಂದು ಬೇಸರ! ಇದರ ಬದಲು ಹೆಣ್ಣುಗಂಡು ಎಂದಿದ್ದು, ಪರಸ್ಪರ ಆಕರ್ಷಣೆ, ಕಾಮಕೂಟ, ಸಂತಾನ, ಸಹಜೀವನ ಇದ್ದರೆ ಎಷ್ಟು ಅದ್ಭುತವಾಗಿರುತ್ತಿತ್ತು!' ಅದಿರಲಿ, ಪ್ರಶ್ನೆಯ ಹಿನ್ನೆಲೆ ಗೊತ್ತಾಗಲಿಲ್ಲವಲ್ಲ?

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿಯ ಸಂಖ್ಯೆ (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿಯ ಸಂಪರ್ಕ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ**